# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **564** |
| ಸದಸ್ಯರ ಹೆಸರು | : | ಶ್ರೀ ಎನ್.ನಾಗರಾಜು (ಎಂ.ಟಿ.ಬಿ)<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | **22.07.2024** |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರಮ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹೊಸಕೋಟೆ ತಾಲ್ಲೂಕಿನ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಕೊಠಡಿಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಹಾಗಿದ್ದಲ್ಲಿ, ಕೊಠಡಿಗಳಿಲ್ಲದಿರುವ ಶಾಲೆಗಳ ಸಂಖ್ಯೆ ಎಷ್ಟು ಮತ್ತು ಅವು ಯಾವುವು; | ಕೊಠಡಿಗಳಿಲ್ಲದಿರುವ ಶಾಲೆಗಳ ಸಂಖ್ಯೆ: 03<br>01. ಸ.ಕಿ.ಪ್ರಾ.ಶಾಲೆ, ಎತ್ತಿನೊಡೆಯನಪುರ<br>02. ಸ.ಕಿ.ಪ್ರಾ.ಶಾಲೆ, ಕೋಟೂರು<br>03. ಸ.ಕಿ.ಪ್ರಾ.ಶಾಲೆ, ಬೊಮ್ಮನಬಂಡ |
| ಇ) | ಕೊರತೆಯಿರುವ ಕೊಠಡಿಗಳನ್ನು ಮಂಜೂರು ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು; ಯಾವಾಗ ಮಂಜೂರು ಮಾಡಲಾಗುತ್ತದೆ? | ಕೊಠಡಿಗಳಿಲ್ಲದಿರುವ ಈ 03 ಶಾಲೆಗಳಿಗೆ 2022-23ನೇ ಸಾಲಿನಲ್ಲಿ ವಿವೇಕ ಮುಂದುವರೆದ ಯೋಜನೆಯಡಿಯಲ್ಲಿ ರೂ.13.90ಲಕ್ಷ ಘಟಕ ವೆಚ್ಚದಂತೆ 03 ಶಾಲೆಗಳಿಗೆ ತಲಾ ಒಂದು ಕೊಠಡಿಯಂತೆ 03 ಕೊಠಡಿಗಳಿಗೆ ರೂ.41.70ಲಕ್ಷಗಳನ್ನು ಮಂಜೂರು ಮಾಡಿದೆ. ಸದರಿ ಕೊಠಡಿಗಳನ್ನು ನಿರ್ಮಾಣ ಮಾಡಲು PREDಗೆ ವಹಿಸಲಾಗಿದ್ದು, ನಿರ್ಮಾಣ ಕಾರ್ಯ ಟೆಂಡರ್ ಹಂತದಲ್ಲಿದೆ.<br>ಮುಂದುವರೆದು ಹೊಸಕೋಟೆ ತಾಲ್ಲೂಕಿನ ಇತರೆ ಶಾಲೆಗಳಿಗೆ ಸಂಬಂಧಿಸಿದಂತೆ ವಿವೇಕ ಮುಂದುವರೆದ ಯೋಜನೆಯಡಿಯಲ್ಲಿ ಮಂಜೂರಾದ 33 ಕೊಠಡಿಗಳ ಪೈಕಿ 14 ಶಾಲಾ ಕೊಠಡಿಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, 05 ಕೊಠಡಿಗಳ ನಿರ್ಮಾಣ ಕಾರ್ಯ ಪ್ರಗತಿ ಹಂತದಲ್ಲಿರುತ್ತವೆ. 12 ಕೊಠಡಿಗಳ ನಿರ್ಮಾಣ ಕಾರ್ಯ ಟೆಂಡರ್ ಹಂತದಲ್ಲಿವೆ. 02 ತರಗತಿ ಕೊಠಡಿಗಳ ನಿರ್ಮಾಣ ಕಾರ್ಯಕ್ಕೆ ಜಾಗದ ಸಮಸ್ಯೆ ಇರುವುದರಿಂದ ಹಾಗೂ ನ್ಯಾಯಾಲಯ ಪ್ರಕರಣದಿಂದಾಗಿ ಪ್ರಾರಂಭವಾಗಿರುವುದಿಲ್ಲ. |

**ಇಪಿ: 214 ಯೋಸಕ 2024**

(ಎಸ್.ಮಧು ಬಂಗಾರಪ್ಪ)

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು